


ಬಿಭೂತಿಭೂಷಣ ಬಂದ್ಯೋಪಾಧ್ಯಾಯ



ಅಹೋಬಲ ಶಂಕರ

ಸೆರಗನ್ನು ತನ್ನ ಧೋತರದ ಅಂಚಿಗೆ ಗಟ್ಟಿಯಾಗಿ ಗಂಟು ಹಾಕಿ ಬಿಟ್ಟಿದ್ದ. ಏಳುವುದಕ್ಕೆ ಹೋಗಿ ಅಪರ್ಣಾ ಹಿಂದಕ್ಕೆಳೆಯಲ್ಪಟ್ಟಳು.'' ಏನೆಲ್ಲ ಹೇಳುತ್ತದೆ ಈ ಮಿಂಚಿನ ಸಾಲು. ಒಂದು ಕಡೆ ಕಲಕತ್ತೆಯಲ್ಲಿ ಹೊಟ್ಟೆಗಿಲ್ಲದೆ ಕಂಗಾಲಾಗಿ ಅಪು ಅಲೆಯುತ್ತಿರುವಾಗ ಹಳೆಯ ಶಾಲೆಯ ಸಹಪಾಠಿಯೊಬ್ಬ ಅಚಾನಕ್ ಸಿಕ್ಕು, ಮರುದಿನ ತಮ್ಮ ಮನೆಗೆ ಬರಲು ಕರೆಯುತ್ತಾನೆ. ಎರಡು ತುತ್ತು ಸಿಕ್ಕೀತು ಎನ್ನುವ ಒಂದೇ ಆಸೆಯಿಂದ ಅಪು ಹೋದರೆ ಒಪ್ಪ ಓರಣ ಐಷಾರಾಮಿನ ಆ ವಿಶಾಲ ಮನೆಯಲ್ಲಿ ವಿಷಣ್ಣವಾದ ಶೂನ್ಯವೊಂದು ಮನಸ್ಸಿಗೆ ಇರಿಯುವಂತೆ ಕವಿದಿರುತ್ತದೆ. ಮನೆಯಲ್ಲಿ ಜನ ಇದ್ದಾರೆ. ಆದರೆ ಕಾಣುತ್ತಿಲ್ಲ. ಗೆಳೆಯನ ಅಮ್ಮ ಒಳಗೆಲ್ಲೋ ಇದ್ದಾರೆ. ಅಕ್ಕ ಎಲ್ಲೋ ಮೆಟ್ಟಿಲು ಹತ್ತಿ ಹೋದಂತೆ ಕಂಡಿದೆ. ಮಧ್ಯಾಹ್ನ ದಾಟಿ ಹೋಗಿದೆ. 'ಕೂತಿರು' ಎಂದ ಗೆಳೆಯ ಒಳಗೆ ಹೋಗಿ ತನ್ನ ಊಟ ಮುಗಿಸಿಕೊಂಡು ಬಂದು ಕೂತು ವೀಳೆಯದೆಲೆ ಹಾಕಿಕೊಳ್ಳುತ್ತ ಮಾತಾಡದೇ ಕೂರುತ್ತಾನೆ. ಅಪ್ಪು ಮೆಲ್ಲಗೆ ಎದ್ದು ಹೊರಬಿದ್ದು ಹೋಗುತ್ತಾನೆ. ಆ ಸನ್ನಿವೇಶದ ಕಿವಿಗಡಚಿಕ್ಕುವ ಮಧ್ಯಾಹ್ನದ ಮೌನ ದಾರುಣವಾದದ್ದು.

ಸಪ್ತರ್ಷಿಮಂಡಲವನ್ನೂ ಮತ್ತು ಬಂದರಿನಲ್ಲಿ ನಿಂತ ಉಗಿ ಹಡಗುಗಳಲ್ಲಿ ಜ್ವಾಲೆಗೆ ಕಲ್ಲಿದ್ದಲು ಹಾಕುವ ಕಲಾಸಿ ಕೆಲಸಕ್ಕಾಗಿ ಗೋಗರೆಯುವ ಹುಡುಗರನ್ನೂ ಬಿಭೂತಿಭೂಷಣರ ನೋಟ ಒಟ್ಟಾಗಿಯೇ ಗ್ರಹಿಸುತ್ತದೆ. ನೀಹಾರಿಕೆಯನ್ನೂ, ಹೂಕುಂಡಗಳ ನಡುವಿನ ಸೊಳ್ಳೆಗಳನ್ನೂ ಒಟ್ಟಾಗಿಯೇ ಗ್ರಹಿಸುತ್ತದೆ. ಪತ್ನಿ ಅಪರ್ಣಾಳಿಗೆ ಪುಸ್ತಕದೊಳಗಿನ ನಕ್ಷತ್ರಪುಂಜಗಳನ್ನು ತೋರಿಸುವಾಗ ಒಮ್ಮೆ ಪುಟ ತಿರುಗಿಸುತ್ತ ಅದರ ಮಧ್ಯೆ ಅತ್ಯಂತ ಸಣ್ಣದಾದ ಬಿಳಿಯ ಬಣ್ಣದ ಹುಳುವೊಂದು ಓಡಾಡುವುದನ್ನು ಅಪು ನೋಡುತ್ತಾನೆ. ಆಗಿನ ಅವನ ಮನೋಗತ ನೋಡಿ: "ವಿಶಾಲವಾದ ಜಗತ್ತು... ನಕ್ಷತ್ರಪುಂಜ... ಉಲ್ಕಾಪಾತ.. ನೀಹಾರಿಕಾ ಶ್ರೇಣಿ... ಕೋಟಿ ಕೋಟಿ ದೃಶ್ಯ, ಅದೃಶ್ಯ ಜಗತ್ತುಗಳನ್ನೊಳಗೊಂಡ ಈ ಅನಂತ ಬ್ರಹ್ಮಾಂಡ – ಇದೇ... ಬ್ರಹ್ಮಾಂಡದ ಆದಿವಾಸಿಯಾದ... ಈಗ, ಇಲ್ಲಿ ಪುಸ್ತಕದ ಹಾಳೆಯ ಮೇಲೆ ಸ್ವೇಚ್ಛೆಯಾಗಿ ಓಡಾಡುತ್ತಿರುವ ಈ ಅತಿ ಚಿಕ್ಕ ಹುಳುವಿನ ಬಾಳುವೆಯ ಆನಂದಕ್ಕೆ ಅರ್ಥವೇನು? ಬೆಲೆಯೇನು? ಎಷ್ಟು ಮಾತ್ರದ್ದು ಅದರ ಬಾಳುವೆ?